**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ 17.03.2023
ಪಾಟಿ ಸವಾಲು ಃ 1 ರಿಂದ 5, 8 ನೇ ಪ್ರತಿವಾದಿಯ ವಾರಸುದಾರರು, 9 ರಿಂದ 11 ನೇ ಪ್ರತಿವಾದಿ ಪರ

ಪ್ರತಿವಾದಿ 1 ರಿಂದ 5, 8 ನೇ ಪ್ರತಿವಾದಿಯ ವಾರಸುದಾರರು, 9 ರಿಂದ 11 ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿದ್ದು , 1 ಮತ್ತು 2 ನೇ ಪ್ರತಿವಾದಿ ಪರ ಸಾಕ್ಷಿಯ ಮುಂದುವರೆದ ಪಾಟಿ ಸವಾಲು ಹಾಗೂ ಇತರೆ ಪ್ರತಿವಾದಿಗಳ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲು ಃ 6 ಮತ್ತು 7 ನೇ ಪ್ರತಿವಾದಿ ಪರ ಶ್ರೀ.ಟಿ.ಎನ್.ಎಸ್.ಕೆ. ವಕೀಲರಿಂದ**

ನನ್ನ ತಂದೆ ಕಾಳೇಗೌಡರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಂದ ಕಾಳೇಗೌಡರ ಮೊದಲನೇ ಪತ್ನಿಯಾಗಿದ್ದು, 3 ನೇ ಪ್ರತಿವಾದಿಯ ತಾಯಿ ನನ್ನ ತಂದೆಯ 2 ನೇ ಹೆಂಡತಿ ಎಂದರೆ ಸರಿ.

3 ನೇ ಪ್ರತಿವಾದಿಗೆ ಕಿರಣ್ ಮತ್ತು ಕಿಶನ್ ಎನ್ನುವ ಇಬ್ಬರು ಮಕ್ಕಳು ಎಂದರೆ ಸರಿ. 3 ನೇ ಪ್ರತಿವಾದಿ ಹೆಂಡತಿ ಅಸ್ವಾಭಾವಿಕವಾಗಿ ಮೃತರಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ಗ್ರಾಮಸ್ಥರೆಲ್ಲಾ ಸೇರಿ 3 ನೇ ಪ್ರತಿವಾದಿಯ ಮೇಲೆ ದೂರು ನೀಡುವುದು ಬೇಡ ಆತನ ಮಕ್ಕಳಿಗೆ ಕುಟುಂಬದ ಸ್ವತ್ತುಗಳಲ್ಲಿ ಭಾಗಾಂಶ ಕೊಡೋಣವೆಂದು ತೀರ್ಮಾನಿಸಿದ್ದರು ಎಂದರೆ ಸರಿ.

3 ನೇ ಪ್ರತಿವಾದಿ ನಂತರ ಮತ್ತೊಂದು ಮದುವೆಯಾಗಿದ್ದು ಬೇರೆ ವಾಸ ಮಾಡುತ್ತಿದ್ದು ಆತನ ಮೊದಲನೇ ಹೆಂಡತಿಯ ಮಕ್ಕಳು ಅವರ ತಾತನ ಹತ್ತಿರ ಬೇರೆ ವಾಸವಿದ್ದಾರೆ ಎಂದರೆ ಸರಿ. ನನಗೆ ದಾವಾ ಸ್ವತ್ತಿನಲ್ಲಿ ಭಾಗಾಂಶದ ಹಕ್ಕು ಇರುವ ರೀತಿಯೇ ಕಿರಣ್ ಮತ್ತು ಕಿಶನ್ ರವರಿಗೂ ಸಹ ಭಾಗಾಂಶದ ಹಕ್ಕು ಇದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.